1592 (2103) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) – ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಂಥಾಲಯ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಎಷ್ಟು ಭ್ರಷ್ಟಾಚಾರ ಮತ್ತು ಅವ್ಯವಹಾರದ ಪ್ರಕರಣಗಳು ಪತ್ತೆಯಾಗಿವೆ (ಪ್ರಕರಣವಾರು ಪೂರ್ಣ ವಿವರಗಳೇನು),

ಆ) ಸರ್ಕಾರಕ್ಕೆ ಇದರಿಂದ ಎಷ್ಟು ರೂ ಗಳ ನಷ್ಟವಾಗಿದೆ,

ಇ) ಇದಕ್ಕೆ ಕಾರಣರಾದವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಈ) ನಷ್ಟವಾಗಿರುವ ಹಣವನ್ನು ಯಾವ ರೀತಿ ವಸೂಲು ಮಾಡಲಾಗುವುದು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) 2001–02ರಿಂದ 2005–06ರ ಸಾಲಿನಲ್ಲಿ ಬೆಂಗಳೂರು ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಹಾಗೂ ಕೇಂದ್ರ ಗ್ರಂಥಾಲಯಗಳಲ್ಲಿ ಪುಸ್ತಕ ಖರೀದಿ ಹಾಗೂ ಪೀರೋಪಕರಣಗಳ ಖರೀದಿಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ

ಆ) ಈ ಬಗ್ಗೆ ಪೂರ್ಣ ಪ್ರಮಾಣದ ತನಿಖೆ ಕೈಗೊಂಡ ನಂತರ ನಷ್ಟದ ಮೊತ್ತ ತಿಳಿಯುತ್ತದೆ

ಇ) ತನಿಖಾ ವರದಿಯನ್ನು ಆಧರಿಸಿ ಮೇಲ್ನೋಟಕ್ಕೆ ತಪ್ಪಿತಸ್ಥರೆಂದು ಕಂಡುಬಂದ ಕೆಲ ಅಧಿಕಾರಿ/ನೌಕರರನ್ನು ಬೆಂಗಳೂರು ನಗರದಿಂದ ಬೇರೆ ಕಡೆಗೆ ವರ್ಗಾಯಿಸಲಾಗಿದೆ ಹಾಗೂ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಮೇಲ್ಕಂಡ ಗ್ರಂಥಾಲಯಗಳ ಲೆಕ್ಕಪತ್ರಗಳ ಬಗ್ಗೆ ವಿಶೇಷ ಆಡಿಟ್ ಮಾಡಿಸಲಾಗುತ್ತಿದೆ

ಈ) ಪೂರ್ಣ ಪ್ರಮಾಣದ ತನಿಖೆಯಲ್ಲಿ ಸರ್ಕಾರಕ್ಕೆ ನಷ್ಟವಾಗಿದೆಯೆಂದು ಕಂಡುಬಂದಲ್ಲಿ ಆಯಾ ಅಧಿಕಾರಿ/ನೌಕರರಿಂದ ನಿಯಮಾನುಸಾರ ವಸೂಲು ಮಾಡುವ ಬಗ್ಗೆ ಪರಿಶೀಲಿಸಲಾಗುವುದು